# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\796\2016\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 05/11/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕ್ 1)ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ಸಿದ್ದಲಿಂಗಮೂರ್ತಿ (ಪ್ರಸ್ತುತ ನಿವೃತ್ತ), 2)ಹೊಸ ಅಗ್ರಹಾರ ಗ್ರಾಮ ಪಂಚಾಯತ್‌ನ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಎಂ.ದಿವ್ಯ (ಪ್ರಸ್ತುತ ಅರ್ಜುನಹಳ್ಳಿ ಗ್ರಾಮ ಪಂಚಾಯತ್), 3) ಮಾಯಿಗೌಡನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಟಿ.ಭವ್ಯ (ಪ್ರಸ್ತುತ ಬಿಳಿಗೆರೆ ಗ್ರಾಮ ಪಂಚಾಯತ್), 4) ಹಂಪಾಪುರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಕೆ.ಶಲ್ಯಾ (ಪ್ರಸ್ತುತ ತಾಲ್ಲೂಕ್ ಪಂಚಾಯತ್‌ನ ಕಾರ್ಯಕ್ರಮ ಸಹಾಯಕರು), 5) ತಿಪ್ಪೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಭರಮಪ್ಪ ಹೆಚ್ ಮಾದರ (ಪ್ರಸ್ತುತ ನಿವೃತ್ತ), 6) ಹರದನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಹೆಚ್.ನಾಗೇಗೌಡ (ಪ್ರಸ್ತುತ ಕುಪ್ಪೆ ಗ್ರಾಮ ಪಂಚಾಯತ್, 7) ಡೋರನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಅನಿತಾ (ಪ್ರಸ್ತುತ ಪ್ರಭಾರ ವ್ಯವಸ್ಥಾಪಕರು) ಮತ್ತು 8) ಕುಪ್ಪೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಎ.ಪಿ.ಪಾಂಡು (ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕ) ರವರ ದುರ್ನಡತೆ ಮತ್ತು ಕರ್ತವ್ಯ ಲೋಪದ ಬಗ್ಗೆ.

**********

ಮೈಸೂರು ಜಿಲ್ಲೆ ಕುವೆಂಪು ನಗರ ಮಾರುತಿ ದೇವಸ್ಥಾನದ ರಸ್ತೆ 4ನೇ ಮುಖ್ಯ ಅನುಸೂಯ ಕಾಂಪ್ಲೆಕ್ಸ್ #11ರ ನಿವಾಸಿಯಾದ ಶ್ರೀ.ಜೆ.ರಾಮನಾಯ್ಕ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕ್ 1) ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ಸಿದ್ದಲಿಂಗಮೂರ್ತಿ (ಪ್ರಸ್ತುತ ನಿವೃತ್ತ), 2) ಹೊಸ ಅಗ್ರಹಾರ ಗ್ರಾಮ ಪಂಚಾಯತ್‌ನ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಎಂ.ದಿವ್ಯ (ಪ್ರಸ್ತುತ ಅರ್ಜುನಹಳ್ಳಿ ಗ್ರಾಮ ಪಂಚಾಯತ್),

3)ಮಾಯಿಗೌಡನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಟಿ.ಭವ್ಯ (ಪ್ರಸ್ತುತ ಬಿಳಿಗೆರೆ ಗ್ರಾಮ ಪಂಚಾಯತ್), 4) ಹಂಪಾಪುರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಕೆ.ಶಲ್ಯಾ (ಪ್ರಸ್ತುತ ತಾಲ್ಲೂಕ್ ಪಂಚಾಯತ್‌ನ ಕಾರ್ಯಕ್ರಮ ಸಹಾಯಕರು), 5) ತಿಪ್ಪೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಭರಮಪ್ಪ ಹೆಚ್ ಮಾದರ (ಪ್ರಸ್ತುತ ನಿವೃತ್ತ), 6) ಹರದನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಹೆಚ್.ನಾಗೇಗೌಡ (ಪ್ರಸ್ತುತ ಕುಪ್ಪೇ ಗ್ರಾಮ ಪಂಚಾಯತ್, 7) ಡೋರನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಅನಿತಾ (ಪ್ರಸ್ತುತ ಪ್ರಭಾರ ವ್ಯವಸ್ಥಾಪಕರು) ಮತ್ತು 8)ಕುಪ್ಪೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಎ.ಪಿ.ಪಾಂಡು (ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕ) [ಇನ್ನು ಮುಂದೆ '1 ರಿಂದ 8ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ] ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ**:– ಕೆಆರ್ ನಗರ ತಾಲ್ಲೂಕ್ ಪಂಚಾಯತ್ ಹಾಗೂ ಮಾಯಿಗೌಡನ ಹಳ್ಳಿ, ಹೊಸ ಅಗ್ರಹಾರ, ಹಂಪಾಪುರ, ತಿಪ್ಪೂರು, ಹರದನಹಳ್ಳಿ, ಡೋರನಹಳ್ಳಿ ಮತ್ತು ಕುಪ್ಪೆ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಟಾನಗೊಳ್ಳುತ್ತಿರುವ ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ಸರ್ಕಾರಿ ಆದೇಶದಂತೆ ಪರಿಶಿಷ್ಟ ಜಾತಿ\ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರುಗಳಿಗೆ ನೀಡಬೇಕಾದ ಮೀಸಲಾತಿಗಳನ್ನು ನೀಡದೇ ನಿಯಮಗಳನ್ನು ಗಾಳಿಗೆ ತೂರಿ ಎದುರುದಾರರು ಅವ್ಯವಹಾರ ನಡೆಸಿದ್ದಾರೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ ರವರನ್ನು ಕೇಳಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು–4 (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

ತಾಲ್ಲೂಕ್ ಪಂಚಾಯತ್‌ನ ಕಾರ್ಯನಿರ್ವಾಹಕ ನಿರ್ವಾಹಕ ಅಧಿಕಾರಿಗಳು ಆಯಾಯ ತಾಲ್ಲೂಕಿನ ಪಂಚಾಯತ್‌ನ ಜನಪ್ರತಿನಿದಿಗಳ ಮುಂದೆ ಪ್ರಸ್ತಾವನೆಯನ್ನು ಮಂಡಿಸಿ ಸರ್ಕಾರದ ಮೀಸಲಾತಿ ಆದೇಶವನ್ನು ಸಭೆಯಲ್ಲಿ ಓದಿ, ತಿಳಿಸಿ, ನಡವಳಿಯಲ್ಲಿ ನಮೂದಿಸಿರುವುದು ಪಂಚಾಯತ್‌ನ ನಡವಳಿಗಳಲ್ಲಿ ಕಂಡು ಬಂದಿದೆ. 2014–15 ರಿಂದ 2016–17ನೇ ಸಾಲಿನವರೆಗಿನ 3 ವರ್ಷಗಳ ಕಾಮಗಾರಿಗಳ ಪೈಕಿ

MYS/T96/16



ಶೇ.50% ಕಾಮಗಾರಿಗಳನ್ನು ವಿವಿಧ ಪಂಗಡಗಳಿಗೆ ನೀಡಿರುವುದು ಕಂಡು ಬಂದಿದ್ದು, ವಿವಿಧ ಪಂಗಡಗಳ ಗುತ್ತಿಗೆದಾರರ ಲಭ್ಯತೆಯ ಬಗ್ಗೆ ಹಾಗೂ ಬೇರೆ ತಾಲ್ಲೂಕ್\ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯ ಗುತ್ತಿಗೆದಾರರು ಲಭ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳಲು ಆಸಕ್ತ ಇರುವ ಬಗ್ಗೆ ಯಾವುದೇ ದಾಖಲಾತಿ\ ಮಾಹಿತಿ ಇಲ್ಲದಿರುವುದರಿಂದ, ಮೀಸಲಾತಿ ಆದೇಶವನ್ನು ಪಾಲಿಸಲಾಗಿದೆಯೆಂದು ಪರಿಗಣಿಸಬಹುದು ಎಂದು ಹೇಳಿದ್ದಾರೆ.

4. ತನಿಖಾ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ತನಿಖಾಧಿಕಾರಿಗಳ ವರದಿ ಏಕಪಕ್ಷೀಯವಾಗಿದೆಯೆಂದು ಮತ್ತು ಅವರು ನೀಡಿದ ಅಭಿಪ್ರಾಯ ವೈಯಕ್ತಿಕವಾಗಿದೆಯೇ ಹೊರತು ಸಾಕ್ಷಿ ಆಧಾರಿತವಲ್ಲವೆಂದು ಹೇಳಿದ್ದಾರೆ.

5. ದೂರಿಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

6. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಮ್ಮ ಪಂಚಾಯತ್ ವ್ಯಾಪ್ತಿಯಲ್ಲಿ 2014–15 ಮತ್ತು 2015–16ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ\ ಪಂಗಡ\ ಇತರೆ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ನೋಂದಾಯಿತ ಗುತ್ತಿಗೆದಾರರಿಗೆ ಶೇ.50ರಷ್ಟು ಮೀಸಲಾತಿಯನ್ನು ನೀಡಿ ಕಾಮಗಾರಿಗಳನ್ನು ಅನುಷ್ಟಾನಗೊಳಿಸಿದೆಯೆಂದು ಹೇಳಿದ್ದಾರೆ.

7. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಮ್ಮ ಪಂಚಾಯತ್ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ\ ಪಂಗಡ\ ಇತರೆ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ನೋಂದಾಯಿತ ಗುತ್ತಿಗೆದಾರರಿಗೆ 2014–15ನೇ ಸಾಲಿನಲ್ಲಿ ಶೇ.61.9, 2015–16ರಲ್ಲಿ ಶೇ.40.3 ಮತ್ತು 2016–17ನೇ ಸಾಲಿನಲ್ಲಿ ಶೇ.50ರಷ್ಟು ಮೀಸಲಾತಿಯನ್ನು ನೀಡಿ ಕಾಮಗಾರಿಗಳನ್ನು ಅನುಷ್ಟಾನಗೊಳಿಸಿದೆಯೆಂದು ಹೇಳಿದ್ದಾರೆ.

8. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಮ್ಮ ಪಂಚಾಯತ್ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ\ ಪಂಗಡ\ ಇತರೆ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ನೋಂದಾಯಿತ ಗುತ್ತಿಗೆದಾರರಿಗೆ 2014–15ನೇ ಸಾಲಿನಲ್ಲಿ ಶೇ.90, 2015–16ರಲ್ಲಿ ಶೇ.68.42 ಮತ್ತು 2016–17ನೇ ಸಾಲಿನಲ್ಲಿ ಶೇ.68.75ರಷ್ಟು ಮೀಸಲಾತಿಯನ್ನು ನೀಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದೆಯೆಂದು ಹೇಳಿದ್ದಾರೆ.

9. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಏಪ್ರಿಲ್, 2016ರಂದು ತಾವು ಸೇವೆಯಿಂದ ನಿವೃತ್ತರಾಗಿದ್ದು, ದೂರುದಾರರು ಹೇಳಿರುವ ಪ್ರಕಾರ ತುಂಡು ಗುತ್ತಿಗೆ ಕಾಮಗಾರಿಯನ್ನು ಅನುಷ್ಠಾನಗೊಳಿಸುವುದು ಕಷ್ಟವಾಗುತ್ತದೆ. ಅದನ್ನು ಅನುಸರಿಸಿದರೆ, ಆರ್ಥಿಕ ವರ್ಷದ ಗುರಿ ಸಾಧನೆ ಮಾಡಲು ಆಗುವುದಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸರ್ಕಾರದ ಆದೇಶ ಪಾಲಿಸಿ, ಆಡಳಿತ ಮಂಡಳಿಯ ಸಹಕಾರ ಪಡೆದುಕೊಂಡು ಕಾರ್ಯನಿರ್ವಹಿಸ ಬೇಕಾಗಿದೆ. ಅದಲ್ಲದೆ, ಕೆಲಸದ ಅವಧಿಯಲ್ಲಿ ಸಾರ್ವಜನಿಕರ ದೂರುಗಳನ್ನು ಸ್ವೀಕರಿಸಿ, ಅವರಿಗೆ ಸ್ಪಂದಿಸಿ ಕಾರ್ಯನಿರ್ವಹಿಸಬೇಕೆಂದು ಹೇಳಿದ್ದಾರೆ.

10. ಏಳನೇ (7ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಮ್ಮ ಪಂಚಾಯತ್ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ\ ಪಂಗಡ\ ಇತರೆ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ನೋಂದಾಯಿತ ಗುತ್ತಿಗೆದಾರರಿಗೆ 2014–15ನೇ ಸಾಲಿನಲ್ಲಿ ಶೇ.100, 2015–16ರಲ್ಲಿ ಶೇ.66.67 ಮತ್ತು 2016–17ನೇ ಸಾಲಿನಲ್ಲಿ ಶೇ.65.62ರಷ್ಟು ಮೀಸಲಾತಿಯನ್ನು ನೀಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದೆಯೆಂದು ಹೇಳಿದ್ದಾರೆ.

11. ಆರು (6) ಮತ್ತು 8ನೇ ಎದುರುದಾರರು ತಮ್ಮ ಆಕ್ಷೇಪಣೆಗಳು ಇಲ್ಲವೆಂದು ಹೇಳಿದ್ದಾರೆ.

12. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಸರ್ಕಾರದ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಡಿ 34 ಬಿಸಿಎ 2004, ಬೆಂಗಳೂರು ದಿನಾಂಕ:10/03/2005ರಲ್ಲಿ ಹೇಳಿದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಉಪಬಂಧದ ಮೂಲಕ ವಿನಾಯಿತಿ ನೀಡಲಾಗಿರುವ ಸಂಗ್ರಹಣೆಗೆ ₹1 ಲಕ್ಷಕ್ಕಿಂತ ಕಡಿಮೆಯಿರುವ ಸರ್ಕಾರಿ ಸ್ವಾಮ್ಯದ ವಿವಿಧ ಸಂಗ್ರಹಣೆ, ಹಕ್ಕುಗಳಲ್ಲಿ ಕಾಮಗಾರಿಗಳ, ಸರಕುಗಳ ಹಾಗೂ ಸೇವೆಗಳ ಸಂಗ್ರಹಣೆಗೆ ಪರಿಶಿಷ್ಟ

mys/796/16



ಜಾತಿ\ ಪಂಗಡ\ ಇತರೆ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ವ್ಯಾಪಾರಿಗಳು\ ಗುತ್ತಿಗೆದಾರರು\ ಸೇವಾ ಪ್ರವರ್ತಕರಿಗೆ ರಾಜ್ಯ ಸರ್ಕಾರವು ಶೇ.50ರವರೆಗೆ ಆಧ್ಯತೆ ನೀಡಿ, ಪರಿಶಿಷ್ಟ ಜಾತಿ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ತಲಾ ಶೇ.20 ಮತ್ತು ಪರಿಶಿಷ್ಟ ಜಾತಿ ಹಾಗೂ ಅಲ್ಪಸಂಖ್ಯಾತರುಗಳಿಗೆ ತಲಾ ಶೇ.5 ರಂತೆ ಆದ್ಯತೆ ನೀಡಬೇಕಿದೆ;

2) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವ್ಯಾಪ್ತಿಯಲ್ಲಿ ವಿವಿಧ ಶೀರ್ಷಿಕೆಗಳಡಿ ಕೈಗೊಳ್ಳಲಾಗುವ ಅಭಿವೃದ್ಧಿ ಕಾಮಗಾರಿಗಳಲ್ಲಿ ಮೇಲೆ ಹೇಳಿದ ಸರ್ಕಾರದ ಆದೇಶದಂತೆ, ಇಲಾಖಾ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವ ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಮೊತ್ತದ ಅಭಿವೃದ್ಧಿ ಕಾಮಗಾರಿಗಳಲ್ಲಿ ನೋಂದಾಯಿತ ಗುತ್ತಿಗೆದಾರರುಗಳಿಗೆ ನಿಯಮಾನುಸಾರ ತುಂಡು ಗುತ್ತಿಗೆ ಮೇಲೆ ಕಡ್ಡಾಯವಾಗಿ ವಹಿಸಿಕೊಡುವಂತೆ ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತದ ಎಲ್ಲಾ ಅಧೀಕ್ಷಕ ಅಭಿಯಂತರರಿಗೆ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಸಂ:ಮುಇಂ:ಪಂರಾಇಂಇ:ತಾಂಸ-2:ಸ.ಇಂ-2:2015-16ರಲ್ಲಿ ಆದೇಶಿಸಿದ್ದಾರೆ;

3) ತನಿಖಾ ವರದಿಯಲ್ಲಿ, 2014-15 ರಿಂದ 2016-17ರ ಅವಧಿಯಲ್ಲಿ ಕೆಆರ್ ನಗರ ತಾಲ್ಲೂಕ್ ಪಂಚಾಯತ್ ಹಾಗೂ ಮಾಯಿಗೌಡನ ಹಳ್ಳಿ, ಹೊಸ ಅಗ್ರಹಾರ, ಹಂಪಾಪುರ, ತಿಪ್ಪೂರು, ಹರದನಹಳ್ಳಿ, ಡೋರನಹಳ್ಳಿ ಮತ್ತು ಕುಪ್ಪೆ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಟಾನಗೊಂಡ ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ಮೇಲೆ ಹೇಳಿದ ಸರ್ಕಾರದ ಆದೇಶವನ್ನು ಪೂರ್ಣ ಪ್ರಮಾಣದಲ್ಲಿ ಪಾಲನೆ ಮಾಡದಿರುವುದು ಕಂಡು ಬಂದಿದೆ;

4) 2014-15 ರಿಂದ 2016-17ನೇ ಸಾಲಿನಲ್ಲಿ ಕೆ.ಆರ್.ನಗರ ತಾಲ್ಲೂಕ್ ಪಂಚಾಯತ್‌ನಲ್ಲಿ ಅನುಷ್ಟಾನಗೊಂಡ ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಅಂದಾಜು ಮೊತ್ತದ ಕಾಮಗಾರಿಗಳ ವಿವರ ಹಾಗೂ ಸರ್ಕಾರದ ಆದೇಶ ಪಾಲನೆಯ ವಿವರಗಳು ಈ ಕೆಳಗಿನಂತಿದೆ –

| ಕ್ರ ಸಂ | ವರ್ಷ | ಕಾಮಗಾರಿಗಳ ಸಂಖ್ಯೆ | ಪ.ಜಾ | ಪ.ಪಂ | ಹಿಂ.ವ | ಅಲ್ಪ ಸಂ. |
|---|---|---|---|---|---|---|
| 1 | 2014-15 | 0 | 0 | 0 | 0 | 0 |
| 2 | 2015-16 | 195 | 4 | 16 | 35 | 0 |
| 3 | 2016-17 | 172 | 16 | 9 | 41 | 2 |

5) 2014-15 ರಿಂದ 2016-17ನೇ ಸಾಲಿನಲ್ಲಿ ಕೆ.ಆರ್.ನಗರ ತಾಲ್ಲೂಕಿನ ಮಾಯಿಗೌಡನ ಹಳ್ಳಿ, ಹೊಸ ಅಗ್ರಹಾರ, ಹಂಪಾಪುರ, ತಿಪ್ಪೂರು, ಹರದನಹಳ್ಳಿ, ಡೋರನಹಳ್ಳಿ ಮತ್ತು ಕುಪ್ಪೆಹಂತ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಟಾನಗೊಂಡ ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಅಂದಾಜು ಮೊತ್ತದ ಕಾಮಗಾರಿಗಳ ವಿವರ ಹಾಗೂ ಸರ್ಕಾರದ ಆದೇಶ ಪಾಲನೆಯ ವಿವರಗಳು ಈ ಕೆಳಗಿನಂತಿದೆ –

| ಕ್ರ ಸಂ | ವರ್ಷ | ಕಾಮಗಾರಿಗಳ ಸಂಖ್ಯೆ | ಪ.ಜಾ | ಪ.ಪಂ | ಹಿಂ.ವ | ಅಲ್ಪ ಸಂ. |
|---|---|---|---|---|---|---|
| ಮಾಯಿಗೌಡನ ಹಳ್ಳಿ | | | | | | |
| 1 | 2014–15 | 11 | 1 | 1 | 0 | 0 |
| 2 | 2015–16 | 20 | 8 | 1 | 0 | 0 |
| 3 | 2016–17 | 05 | 2 | 0 | 0 | 0 |
| ಹೊಸ ಅಗ್ರಹಾರ | | | | | | |
| 1 | 2014–15 | 10 | 4 | 0 | 1 | 0 |
| 2 | 2015–16 | 14 | 2 | 0 | 5 | 0 |
| 3 | 2016–17 | 14 | 3 | 1 | 0 | 0 |
| ಹಂಪಾಪುರ | | | | | | |
| 1 | 2014–15 | 30 | 2 | 16 | 9 | 0 |
| 2 | 2015–16 | 19 | 0 | 5 | 8 | 0 |
| 3 | 2016–17 | 32 | 0 | 16 | 6 | 0 |
| ತಿಪ್ಪೂರು | | | | | | |
| 1 | 2014–15 | 11 | 0 | 0 | 11 | 0 |
| 2 | 2015–16 | 10 | 0 | 1 | 9 | 0 |
| 3 | 2016–17 | 19 | 0 | 8 | 11 | 0 |
| ಹರದನಹಳ್ಳಿ | | | | | | |
| 1 | 2014–15 | 35 | 0 | 0 | 26 | 0 |
| 2 | 2015–16 | 6 | 0 | 0 | 2 | 0 |
| 3 | 2016–17 | 7 | 1 | 0 | 4 | 0 |
| ಡೋರನಹಳ್ಳಿ | | | | | | |
| 1 | 2014–15 | 12 | 0 | 0 | 12 | 0 |
| 2 | 2015–16 | 15 | 0 | 0 | 10 | 0 |
| 3 | 2016–17 | 29 | 5 | 1 | 12 | 1 |
| ಕುಪ್ಪೆಹಂತ | | | | | | |
| 1 | 2014–15 | 72 | 0 | 0 | 29 | 0 |
| 2 | 2015–16 | 15 | 0 | 0 | 10 | 0 |
| 3 | 2016–17 | 14 | 0 | 0 | 9 | 0 |

mys/796/16



6) ₹1 ಲಕ್ಷಕ್ಕಿಂತ ಕಡಿಮೆ ಮೊತ್ತದ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇರೆಗೆ ನೀಡುವ ಸಂದರ್ಭದಲ್ಲಿ ಸರ್ಕಾರದ ಆದೇಶದಂತೆ ನೀಡಬೇಕಾದ ಮೀಸಲಾತಿ ಪಾಲಿಸ ಬೇಕಾದ್ದಲ್ಲಿ, ಈ ಕೆಳಗಿನಂತೆ ಕ್ರಮ ವಹಿಸ ಬೇಕಾಗಿದೆ –

1. ಅನುಷ್ಠಾನಗೊಳಿಸಬೇಕಾದ ಕಾಮಗಾರಿಗಳ ಪೈಕಿ ₹1 ಲಕ್ಷ ಅಂದಾಜಿಗಿಂತ ಕಡಿಮೆ ಮೊತ್ತದ ಕಾಮಗಾರಿಗಳನ್ನು ವಿಂಗಡಿಸಿ ಪ್ರತ್ಯೇಕ ವಹಿಯಲ್ಲಿ ನಮೂದಿಸಬೇಕು;
2. ಈ ವಹಿಯಲ್ಲಿ ಇರುವ ಕಾಮಗಾರಿಗಳನ್ನು ಸರ್ಕಾರದ ಆದೇಶದಲ್ಲಿ ನೀಡಲಾಗಿರುವ ಶೇಖಡಾವಾರು ಆಧ್ಯತೆ ನೀಡಿದ ವಿವಿಧ ವರ್ಗಗಳಿಗೆ ನೀಡಬಹುದಾದ ಕಾಮಗಾರಿಗಳನ್ನು ಗುರುತಿಸಬೇಕು, ಎಂದರೆ ಒಟ್ಟು 20 ಕಾಮಗಾರಿಗಳಿದ್ದಲ್ಲಿ ಶೇ.20ರಷ್ಟು ಎಂದರೆ ತಲಾ 4 ಕಾಮಗಾರಿಗಳನ್ನು ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳಿಗೆ ಹಾಗೂ ಶೇ.5ರಷ್ಟು ಎಂದರೆ ತಲಾ 01 ಕಾಮಗಾರಿಯನ್ನು ಪರಿಶಿಷ್ಟ ಪಂಗಡ ಹಾಗೂ ಅಲ್ಪ ಸಂಖ್ಯಾತ ವರ್ಗದ ಗುತ್ತಿಗೆದಾರರುಗಳಿಗೆ ಆಧ್ಯತೆ ನೀಡಿ ವಹಿಯಲ್ಲಿ ಗುರುತಿಸಬೇಕು;
3. ಅನುಷ್ಠಾನಗೊಳಿಸ ಬೇಕಾಗಿರುವ ಕಾಮಗಾರಿಗಳ ಪಟ್ಟಿಯನ್ನು ವಿವರದೊಂದಿಗೆ ಸಾಕಷ್ಟು ಪ್ರಚಾರ ಸಿಕ್ಕುವಂತೆ ಪ್ರಕಟಣೆ ಹೊರಡಿಸಬೇಕು;
4. ಅನುಷ್ಠಾನಗೊಳಿಸಲು ಇಚ್ಛೆ ಇರುವ ಅರ್ಹ ಗುತ್ತಿಗೆದಾರರುಗಳ ಅರ್ಜಿಗಳನ್ನು ಪಡೆದು ಜೇಷ್ಠತೆ ಆಧಾರದ ಮೇರೆಗೆ ಆಯಾ ವರ್ಗದ ಗುತ್ತಿಗೆದಾರರುಗಳಿಗೆ ನೀಡಬೇಕು ಮತ್ತು ವಹಿಯಲ್ಲಿ ಈ ಬಗ್ಗೆ ದಾಖಲಿಸಬೇಕು;
5. ಪ್ರತಿ ತಿಂಗಳು ಗುತ್ತಿಗೆ ಕರಾರು ಆದೇಶ ನೀಡಿದ ಬಗ್ಗೆ ಘೋಷ್ವಾರೆ ಸಿದ್ದಪಡಿಸಿ ಅದರಲ್ಲಿ ವಿವಿಧ ಮೀಸಲು ವರ್ಗಗಳಿಗೆ ನೀಡಲಾದ ಕಾಮಗಾರಿಗಳ ಶೇಕಡಾ ವಿವರ ನಮೂದಿಸಬೇಕು. ಆಧ್ಯತೆ ನೀಡುವಲ್ಲಿ ವ್ಯತ್ಯಾಸವಾಗಿದ್ದಲ್ಲಿ, ಮುಂದಿನ ತಿಂಗಳುಗಳಲ್ಲಿ ಈ ವ್ಯತ್ಯಾಸಗಳನ್ನು ಸರಿಪಡಿಸಲು ಸೂಕ್ತ ಕ್ರಮ ವಹಿಸಬೇಕು.

7) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:SWD 34 BCA 2004 ಬೆಂಗಳೂರು ದಿನಾಂಕ:10/03/05 ಅನ್ವಯ ಮೇಲೆ ಹೇಳಿದ ಕ್ರಮಗಳನ್ನು ದೂರಿನ ಎದುರುದಾರರುಗಳು ವಹಿಸಿಲ್ಲವೆಂದು ಕಡತದಲ್ಲಿರುವ ಅಂಕಿ–ಅಂಶಗಳಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ;

8) ಎದುರುದಾರರುಗಳು ತಮ್ಮ ಕಾರ್ಯಾವಧಿಯಲ್ಲಿ ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅನುಷ್ಠಾನಗೊಂಡ ₹1 ಲಕ್ಷಕ್ಕಿಂತ ಕಡಿಮೆಯ ತುಂಡು ಗುತ್ತಿಗೆ ಕಾಮಗಾರಿಗಳನ್ನು ಆಧ್ಯತೆ ಅನುಸಾರ ಮೇಲೆ ಹೇಳಿದ ಸರ್ಕಾರದ ಆದೇಶದನ್ವಯ ಪ್ರತಿ ವರ್ಗಗಳಿಗೆ ನೀಡದಿರುವುದು ಕಂಡು ಬಂದಿದೆ. ಆದ್ದರಿಂದ, ಎದುರುದಾರರುಗಳು ಮೇಲೆ ಹೇಳಿದ ಸರ್ಕಾರಿ ಆದೇಶವನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

13. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ತನಿಖಾ ವರದಿ ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

14. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

15. ಅದಲ್ಲದೆ 1 ರಿಂದ 8ನೇ ಎದುರದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಹಾಗೂ 1 ಮತ್ತು 5ನೇ ಎದುರುದಾರರು ಕ್ರಮವಾಗಿ, ದಿನಾಂಕ:31/03/2018 ಮತ್ತು 31/03/2016ರಂದು ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ** 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

16. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 1 ಮತ್ತು 5ನೇ ಎದುರುದಾರರು ಕ್ರಮವಾಗಿ, ದಿನಾಂಕ:31/03/2018 ಮತ್ತು 31/03/2016ರಂದು ನಿವೃತ್ತಿ ಹೊಂದಿದ್ದಾರೆ.

N. Anand

(ನ್ಯಾಯಮೂರ್ತಿ ಎನ್.ಆನಂದ)

**ಉಪಲೋಕಾಯುಕ್ತ,**

**ಕರ್ನಾಟಕ ರಾಜ್ಯ.**